# IN THE COURT OF THE ADDL. SENIOR CIVIL JUDGE & JMFC., GUBBI

# **OS – 65/2016**

Witness present and duly sworn on : 04.09.2025.

Further cross Examination: by Counsel for defendant No.25. :

25 ನೇ ಪ್ರತಿವಾದಿ ರತ್ನಮ್ಮ ನವರು ನನ್ನ ಅಣ್ಣನಾದ ರಾಮಣ್ಣನವರನ್ನು ಮದುವೆಯಾದ ನಂತರ ನಾವೆಲ್ಲರೂ ಒಟ್ಟಿಗೆ ಕೆರೆಅಂಗಳದ ಹನುಮಂತಪುರದಲ್ಲಿ ವಾಸ ಇದ್ದೇವು ಎಂದರೆ ಸರಿ. ಸದರಿ ಊರಿನಲ್ಲಿ ವಾಸ ಇದ್ದಾಗ ನಾವೆಲ್ಲರೂ ಪಿತ್ರಾರ್ಜಿತ ಮತ್ತು ಒಟ್ಟು ಕುಟುಂಬದ ಆಸ್ತಿಗಳಿಗಿದ್ದ ಅಡಿಕೆ ಮತ್ತು ತೆಂಗಿನ ತೋಟಗಳನ್ನು ನೋಡಿಕೊಳ್ಳುತ್ತಿದ್ದೇವು ಎಂದರೆ ಅವುಗಳು ಖಾಲಿ ಜಾಗ ಇದ್ದವು. ಈಗ ಅಡಿಕೆ ಮತ್ತು ತೆಂಗಿನ ತೋಟ ಹಾಗೂ ಕೊಳವೆ ಬಾವಿ ಇದೆ ಎಂದರೆ ಕೊಳವೆ ಬಾವಿ ಇರುವುದಿಲ್ಲ. ನಮ್ಮ ಕುಟುಂಬಕ್ಕೆ ಆದಾಯ ಬರುತ್ತಿದ್ದ ಜಮೀನುಗಳು ಇದ್ದ ಕಾರಣ ಮತ್ತು ಸದರಿ ಜಮೀನುಗಳ ಆದಾಯದಿಂದ ನನ್ನ ತಂದೆಯು ಮುದಿಗೆರೆ ಗ್ರಾಮದ ಸರ್ವೆ ನಂ.109/1 ಮತ್ತು 115/1 ಜಮೀನುಗಳನ್ನು ನನ್ನ ತಾಯಿಯ ಹೆಸರಿಗೆ ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ ಒಳ್ಳೆಯ ಆದಾಯ ಇದ್ದ ಕಾರಣ ನನ್ನ ತಾಯಿಗೆ ಕೂಲಿಗೆ ಹೋಗುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ತಾಯಿ ಅವರ 8 ಮಕ್ಕಳ ಪಾಲನೆ ಪೋಷಣೆಗೆ ಸುಮಾರು 16 ವರ್ಷ ಕೊಟ್ಟಿರುತ್ತಾರೆಂದರೆ ಸರಿಯಲ್ಲ.

ನನ್ನ ತಂದೆ ಮುದ್ದಯ್ಯ ಮತ್ತು ಅವರ ಅಣ್ಣ ತಮ್ಮಂದಿರು ಭಾಗ ಮಾಡಿಕೊಂಡಿರುತ್ತಾರೆ. ಅದರ ಬಗ್ಗೆ ಪಾಲುಪಟ್ಟಿ ಮಾಡಿಕೊಂಡಿರುತ್ತಾರೆ. ಸದರಿ ದಾಖಲೆಯನ್ನು ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ. ಸದರಿ ದಾಖಲೆಯು ನನ್ನ ಹತ್ತಿರ ಇದ್ದು ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ನನ್ನ ಅಣ್ಣಂದಿರಾದ ಹನುಮಂತಯ್ಯ ಮತ್ತು ರಾಮಯ್ಯ ರವರ ಹತ್ತಿರ ಇರುತ್ತದೆ. 25 ನೇ ಪ್ರತಿವಾದಿ ರತ್ನಮ್ಮರವರು ಅವರ ಗಂಡನ ಮರಣದ ನಂತರ ಒಟ್ಟು ಕುಟುಂಬದ ಆಸ್ತಿಗಳಲ್ಲಿ ಭಾಗ ಕೇಳಿದ್ದರು ಎಂದರೆ ನಾವು ಭಾಗ ಕೊಟ್ಟಿದ್ದೇವೆ. 25 ನೇ ಪ್ರತಿವಾದಿಗೆ ಭಾಗ ಕೊಟ್ಟಿರುವ ಬಗ್ಗೆ ದಾಖಲೆ ಇದೆಯಾ ಎಂದರೆ ಅವರ ಗಂಡನಿಗೆ ಕೊಟ್ಟಿರುವ ಬಗ್ಗೆ ದಾಖಲೆ ಇದೆ. ಸದರಿ

ದಾಖಲೆಯನ್ನು ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ. ಸದರಿ ದಾಖಲೆಯನ್ನು ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಬಲ್ಲೇನು. ಮುದಿಗೆರೆ ಗ್ರಾಮದ ಸರ್ವೆ ನಂ.109/1 ಮತ್ತು 115/1 ಒಟ್ಟು ಕುಟುಂಬದ ಆಸ್ತಿಗಳಾಗಿದ್ದು, ಅವುಗಳಲ್ಲಿ 25 ನೇ ಪ್ರತಿವಾದಿಗೆ ಭಾಗ ಕೊಟ್ಟಿದ್ದಿರಾ ಎಂದರೆ ಅವುಗಳು ನನ್ನ ತಾಯಿಯ ಆಸ್ತಿಯಾದ ಕಾರಣ ಭಾಗ ಕೊಟ್ಟಿಲ್ಲ. ಆದ ಕಾರಣ 25 ನೇ ಪ್ರತಿವಾದಿಯು ಭಾಗ ಕೋರಿ OS No.240/2013 ದಾವೆ ಸಲ್ಲಿಸಿದ್ದರು ಎಂದರೆ ಭಾಗ ಪಡೆದ ನಂತರ ಸದರಿ ದಾವೆಯನ್ನು ಸಲ್ಲಿಸಿರುತ್ತಾರೆ. ಸದರಿ ದಾವೆಯಲ್ಲಿ ಮುದಿಗೆರೆ ಗ್ರಾಮದ ಸರ್ವೆ ನಂ.109/1 ಮತ್ತು 115/1 ಆಸ್ತಿಗಳು ದಾವಾ ಐಟಂ ನಂ.4 ಮತ್ತು 5 ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ 25 ನೇ ಪ್ರತಿವಾದಿಯು ಮುದಿಗೆರೆ ಗ್ರಾಮದ ಸರ್ವೆ ನಂ.109/1 ಮತ್ತು 115/1 ಆಸ್ತಿಗಳನ್ನು ಲಿಖಿತ ಪತ್ರದ ಆಸ್ತಿ ಸಂಖ್ಯೆ ಐಟಂ ನಂ.3 ಮತ್ತು 4 ಎಂದು ತೋರಿಸಿದ್ದಾರೆಂದರೆ ನನಗೆ ಗೊತ್ತಿಲ್ಲ.

ನನ್ನ ತಾಯಿ ಲಕ್ಕಮ್ಮ ರವರು ಅನಕ್ಷರಸ್ಥೆಯಾದ ಕಾರಣ ನಾನು ಮತ್ತು ನನ್ನ ಸಹೋದರರಾದ ಸಂಜೀವಯ್ಯ, ಸಂಜೀವಯ್ಯ, ಚನ್ನಬಸವಯ್ಯ, ರಮೇಶ್ ರವರು ನನ್ನ ತಾಯಿಯನ್ನು ಕರೆದುಕೊಂಡು ಹೋಗಿ ದಾನಪತ್ರಗಳನ್ನು ಸೃಷ್ಟಿಸಿದ್ದೇವೆ ಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ದಾಖಲೆಗಳನ್ನು ನನ್ನ ತಾಯಿ ಮಾಡಿಕೊಟ್ಟಿದ್ದಾರೆ. 25 ನೇ ಪ್ರತಿವಾದಿಗೆ ಭಾಗ ಕೊಡಬೇಕಾಗುತ್ತದೆಂದು ಅವರ ಲಿಖಿತ ಪತ್ರದ ಐಟಂ ನಂ.5 ರಿಂದ 13 ಆಸ್ತಿಗಳಿಗೆ ಸಂಭಂದಿಸಿದಂತೆ ದಾಖಲೆಗಳನ್ನು ಸೃಷ್ಟಿಸಿದ್ದೇವೆಂದರೆ ಸರಿಯಲ್ಲ. 25 ನೇ ಪ್ರತಿವಾದಿಯ ಗಂಡನ ಜೀವಿತ ಕಾಲದಲ್ಲಿ ನಾವು ಆಸ್ತಿಗಳ ಜಂಟಿ ಸ್ವಾಧೀನದಲ್ಲಿ ಇದ್ದೇವು ಎಂದರೆ ಸರಿ. ಸಾಕ್ಷಿ ಮುಂದುವರೆದು 25 ನೇ ಪ್ರತಿವಾದಿಯ ಗಂಡನ ಮರಣದ ಮೊದಲು ನಾವುಗಳು ವಿಭಾಗ ಮಾಡಿಕೊಂಡಿರುತ್ತೇವೆ. ರತ್ನಮ್ಮ ರವರಿಗೆ ಭಾಗ ಕೊಡಬೇಕಾಗುತ್ತದೆಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**<u>Re examination - Nil</u>**

(Typed to my dictation in open court)

R.O.I & A.C.

Addl. Senior Civil Judge and
JMFC., Gubbi